ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ: 17ನೇ ಜುಲೈ, 2019

ನಕಲಿ ದಾಖಲೆ ಸಲ್ಲಿಸಿ ಭೂಮಾರಾಟ ಮಾಡಿರುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

249 (32) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ಜಿಲ್ಲೆಯ ಗಂಗೇನ ಹಳ್ಳಿಯ ನಂ. 1 ರಿಂದ 99, ವರ್ತೂರು ಸರ್ವೆ ನಂ 7 ರಿಂದ 10 ವರ್ತೂರು ನರಸೀಪುರ ಸರ್ವೆ ನಂ 1 ರಿಂದ 35 ಹಾಗೂ ಪೆದ್ದನ ಪಾಳ್ಯ ಸರ್ವೆ ನಂ 17 ರಿಂದ 20 ಪ್ರಸ್ತುತ ಯಾರ ಹೆಸರಿನಲ್ಲಿದೆ ; ಈ ಜಾಗ ಅವರುಗಳ ಹೆಸರಿಗೆ ವರ್ಗಾವಣೆಯಾಗಿದ್ದು ಯಾವಾಗ; ಯಾರ ಆದೇಶದ ಮೇಲೆ ಆಗಿದೆ ;

(ಆ) ಸದರಿ ಸರ್ವೆಗಳಿಗೆ ಸಂಬಂಧಿಸಿದ ಕೈ ಬರಹದ ಪಹಣಿ, ಖೇತುವಾರು ಮತ್ತು ಆಕಾರ್ ಬಂದ್, ಮೈಸೂರು ಸೆಟಲ್ ಮೆಂಟ್ ಪ್ರತಿ, ಇನಾಂ ಕುರಿತ ಡಿ ಸಿ ಆದೇಶಗಳಲ್ಲಿ ನಮೂದಿಸಿದಂತೆ ಈ ಜಮೀನಿನ ಮಾಲೀಕರೆಂದು ಯಾವ ಹೆಸರನ್ನು ನಮೂದಿಸಿದೆ; (ದಾಖಲೆಗಳ ಪ್ರತಿಗಳನ್ನು ಒದಗಿಸುವುದು)

(ಇ) ಸದರಿ ಸರ್ವೆಗಳ ಜಮೀನುಗಳನ್ನು ಮಂಜೂರು ಮಾಡುವಂತೆ ಕೋರಿ ಮನವಿ ಸಲ್ಲಿಸಿದವರು ಯಾರು ? (ಈ ಕುರಿತು ವಿವರ ನೀಡುವುದು)